ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.kar.nic.in

ಸಂಖ್ಯೆ:ಸಮನ್ವಯ:ಕೈವ:ವರ್ಗೀಕರಣ:ಹೊಕೈನೀತಿ:2014-19/2016 | 4304. ದಿನಾಂಕ: 09-02-2016

15 FEB 2016

# ಕಛೇರಿ ಆದೇಶ

**ವಿಷಯ:** **ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ಅನ್ವಯ ನಿಗಮದ ವತಿಯಿಂದ ಸ್ಥಾಪಿಸಲ್ಪಟ್ಟಿರುವ ಕೈಗಾರಿಕಾ ವಸಾಹತುಗಳನ್ನು ವಲಯಗಳನ್ನಾಗಿ ವರ್ಗೀಕರಿಸುವ ಬಗ್ಗೆ.**

ಉಲ್ಲೇಖ:
1) Office Order No.FEA:IE:Categorisation:2005 dt.03.05.2005
2) ಸುತ್ತೋಲೆ ಸಂಖ್ಯೆ ಸಮನ್ವಯ:ಕೈವ:ವರ್ಗೀಕರಣ:ಗುಂಪು:2008-09 ದಿನಾಂಕ 21-04-2009.
3) ಸರ್ಕಾರಿ ಆದೇಶ ಸಂಖ್ಯೆ ಸಿಐ 58 ಎಸ್‌ಪಿಐ 2013 ಬೆಂಗಳೂರು ದಿನಾಂಕ 01-10-2015
4) ದಿನಾಂಕ 14-01-2016ರ ನಿಗಮದ 337ನೇ ಮಂಡಳ ಸಭೆಯ ನಡವಳಿಗಳು.

--------

**ಪ್ರಸ್ತಾವನೆ:**

ನಿಗಮದ ಮಂಡಳಿಯ ನಿರ್ಣಯದನ್ವಯ ದಿನಾಂಕ 01.04.2005 ರಿಂದ ಜಾರಿಗೆ ಬರುವಂತೆ ಹಾಗೂ ಇದಕ್ಕೆ ಪೂರ್ವದಲ್ಲಿ ನಿಗಮವೂ ಸಹ ತನ್ನದೇ ಆದ ಕೈಗಾರಿಕಾ ವಸಾಹತುಗಳ ವರ್ಗೀಕರಣ ನೀತಿಯನ್ನು ಅಳವಡಿಸಿಕೊಂಡಿರುತ್ತದೆ. ಅಂತೆಯೇ, ಈ ಹಿಂದೆ ಕೈಗಾರಿಕಾ ವಸಾಹತು ಗಳಲ್ಲಿನ ಮಳಿಗೆ ಮತ್ತು ನಿವೇಶನಗಳ ಬೇಡಿಕೆಗೆ ಅನುಗುಣವಾಗಿ ನಿಗಮದ ಮಂಡಳಿಯು ತನ್ನದೇ ಆದ ಕೈಗಾರಿಕಾ ವಸಾಹತುಗಳನ್ನು 3 ವಲಯಗಳನ್ನಾಗಿ ವಿಂಗಡಿಸಿ ವರ್ಗೀಕರಣ ಮಾಡಿತ್ತು. ಮುಂದುವರೆದಂತೆ, ಕೈಗಾರಿಕಾ ವಸಾಹತುಗಳನ್ನು ವರ್ಗೀಕರಣ ಮಾಡುವುದರ ಬಗ್ಗೆ ಕರ್ನಾಟಕ ಸರ್ಕಾರವು 2009-14ರ ಅವಧಿಯ ಹೊಸ ಕೈಗಾರಿಕಾ ನೀತಿಯಲ್ಲಿ ರಾಜ್ಯದಲ್ಲಿನ ತಾಲ್ಲೂಕುಗಳನ್ನು 4 ವಲಯಗಳನ್ನಾಗಿ ವರ್ಗೀಕರಿಸಿತ್ತು. ಅಂತೆಯೇ ನಿಗಮದ ಮಂಡಳಿಯು ನಿಗಮದ ತನ್ನದೇ ಆದ ವರ್ಗೀಕರಣದನ್ವಯ ಹಾಗೂ ಕೈಗಾರಿಕಾ ನೀತಿಯಂತೆಯೂ ಕೈಗಾರಿಕಾ ವಸಾಹತುಗಳನ್ನು ವರ್ಗೀಕರಿಸಲು ಅನುಮೋದಿಸಿತ್ತು. ಅದರಂತೆ 2009-14ರ ಅವಧಿಗೆ ಅನ್ವಯವಾಗುವ ಸರ್ಕಾರದ ಕೈಗಾರಿಕಾ ನೀತಿ ಅನ್ವಯ, ರಾಜ್ಯದಲ್ಲಿನ ತಾಲ್ಲೂಕುಗಳನ್ನು ಕೆಳಕಂಡಂತೆ 04 ವಲಯ ಗಳನ್ನಾಗಿ ವರ್ಗೀಕರಿಸಿದ್ದು, ನಿಗಮದಲ್ಲಿಯೂ ಸಹ ಅಳವಡಿಸಿ, ಉಲ್ಲೇಖ(2)ರಂತೆ ಸುತ್ತೋಲೆ ಹೊರಡಿಸಲಾಗಿತ್ತು. ವಿವರಗಳು ಇಂತಿವೆ:-

| ತಾಲ್ಲೂಕುಗಳು | ಕರ್ನಾಟಕ ಸರ್ಕಾರದ ಕೈಗಾರಿಕಾ ನೀತಿಯ ಮೇರೆಗೆ ವರ್ಗೀಕರಣ | ನಿಗಮದ ನಿರ್ದೇಶನ ಸೂತ್ರಗಳ ಮೇರೆಗೆ ವರ್ಗೀಕರಣ |
|---|---|---|
| ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು | ವಲಯ-4 | ಎ |
| ಹಿಂದುಳಿದ ತಾಲ್ಲೂಕುಗಳು | ವಲಯ-3 | ಬಿ |
| ಅತಿ ಹಿಂದುಳಿದ ತಾಲ್ಲೂಕುಗಳು | ವಲಯ-2 | ಸಿ |
| ಅತ್ಯಂತ ಹಿಂದುಳಿದ ತಾಲ್ಲೂಕುಗಳು | ವಲಯ-1 | ಡಿ |

ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ರಾಜ್ಯದ ತಾಲ್ಲೂಕುಗಳನ್ನು ಪ್ರಮುಖವಾಗಿ ಹೈದರಾಬಾದ್-ಕರ್ನಾಟಕ (ಹೈ.ಕ.) ವಲಯ ಮತ್ತು ಹೈದರಾಬಾದ್-ಕರ್ನಾಟಕ ಅಲ್ಲದ ವಲಯ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬರುವ ತಾಲ್ಲೂಕುಗಳನ್ನು ಹೆಚ್.ಕೆ.ವಲಯ-1 ಮತ್ತು ಹೆಚ್.ಕೆ.ವಲಯ-2 ಎಂಬುದಾಗಿಯೂ, ಹೈದರಾಬಾದ್-ಕರ್ನಾಟಕ ಪ್ರದೇಶದ ತಾಲ್ಲೂಕುಗಳನ್ನು ಬಿಟ್ಟು ಇತರೇ ತಾಲ್ಲೂಕುಗಳನ್ನು ಅನುಕ್ರಮವಾಗಿ ವಲಯ-1, ವಲಯ-2, ವಲಯ-3 ಮತ್ತು ವಲಯ-4 ಎಂಬುದಾಗಿಯೂ ಒಟ್ಟಾರೆ

..2..

06 ವಲಯಗಳನ್ನಾಗಿ ವರ್ಗೀಕರಣ ಮಾಡಲಾಗಿದ್ದು, ಸರ್ಕಾರದಿಂದ ಹೊರಡಿಸಲ್ಪಟ್ಟಿರುವ ಉಲ್ಲೇಖ(3)ರ ಸರ್ಕಾರಿ ಆದೇಶದಲ್ಲಿ ಈ ಹಿಂದೆ ವರ್ಗೀಕರಿಸಲಾಗಿದ್ದಂತೆ ತಾಲ್ಲೂಕುಗಳನ್ನು ಕ್ರಮವಾಗಿ ಎ, ಬಿ, ಸಿ, ಡಿ ಎಂಬುದಾಗಿ ವರ್ಗೀಕರಣ ಮಾಡಿರುವುದಿಲ್ಲ ಹಾಗೂ ಕೇವಲ ವಲಯ-1, 2, 3 ಮತ್ತು 4 ಹಾಗೂ ಹೆಚ್.ಕೆ.ವಲಯ-1 ಮತ್ತು ಹೆಚ್.ಕೆ.ವಲಯ-2 ಎಂಬುದಾಗಿ ವರ್ಗೀಕರಣ ಮಾಡಲಾಗಿರುತ್ತದೆ. ಅದರಂತೆಯೇ ಸದರಿ ವರ್ಗೀಕರಣವನ್ನು ನಿಗಮದಲ್ಲಿಯೂ ಅಳವಡಿಸಿಕೊಳ್ಳಬೇಕಿದ್ದು, ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ಅನ್ವಯ ವರ್ಗೀಕರಣ ಮಾಡಲಾಗಿರುವ ವಲಯ-3 ಮತ್ತು ವಲಯ-4ರ ವ್ಯಾಪ್ತಿಯಲ್ಲಿ ಬರುವ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ಮಳಿಗೆ/ಫ್ಲ್ಯಾಟ್ಸ್/ ಗೋದಾಮು ಹಾಗೂ ನಿವೇಶನಗಳ ಮೌಲ್ಯಗಳನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ನಿಗಮದಲ್ಲಿ ಪ್ರಚಲಿತದಲ್ಲಿರುವಂತೆ **'ಎ'** ಮತ್ತು **'ಬಿ'** **ಪ್ರವರ್ಗ**ಗಳಿಗೆ ಅನುಸರಿಸಲಾಗುತ್ತಿರುವ **ಮಾರ್ಗಸೂಚಿ**ಗಳನ್ನು ಅನುಸರಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಯಿತು.

ಸದರಿ ಅಂಶಗಳ ಹಿನ್ನೆಲೆಯಲ್ಲಿ ನಿಗಮದ ಕೈಗಾರಿಕಾ ವಸಾಹತುಗಳ ಕಾರ್ಯಚಟುವಟಿಕೆಗಳ ಸುಗಮ ಆಡಳಿತದ ಸಲುವಾಗಿ, ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ನಮೂದಿಸಲಾಗಿರುವಂತೆಯೇ ನಿಗಮದ ವತಿಯಿಂದ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕಾ ವಸಾಹತುಗಳಿರುವ ಆಯಾ ತಾಲ್ಲೂಕುಗಳು ಹಾಗೂ ನಿಗಮದ ಕೈಗಾರಿಕಾ ವಸಾಹತುಗಳನ್ನೂ ಸಹ ಅದೇ ರೀತಿ ರಾಜ್ಯದ ತಾಲ್ಲೂಕುಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶ ತಾಲ್ಲೂಕುಗಳು ಹೆಚ್‌ಕೆ ವಲಯ-1 / ಹೆಚ್‌ಕೆ ವಲಯ-2 ಎಂಬುದಾಗಿಯೂ ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶ ತಾಲ್ಲೂಕುಗಳನ್ನು ಬಿಟ್ಟು ಇತರೇ ತಾಲ್ಲೂಕುಗಳನ್ನು ಕ್ರಮವಾಗಿ ವಲಯ-1, ವಲಯ-2, ವಲಯ-3 ಮತ್ತು ವಲಯ-4 ಎಂಬುದಾಗಿ ಒಟ್ಟು 4 ವಲಯಗಳನ್ನಾಗಿ ವರ್ಗೀಕರಣ ವಲಯಗಳನ್ನಾಗಿ ವರ್ಗೀಕರಣ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಹಾಗೂ ನಿಗಮದ ಮಳಿಗೆ/ನಿವೇಶನ/ಫ್ಲ್ಯಾಟ್ಸ್/ಗೋದಾಮುಗಳ ಮೌಲ್ಯ ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ನಿಗಮದಲ್ಲಿ ಜಾರಿಯಲ್ಲಿರುವ **ಪ್ರಚಲಿತ ಮಾರ್ಗಸೂಚಿ**ಗಳನ್ನು ಅನುಸರಿಸಿಕೊಂಡು ಹೋಗುವ ಬಗೆಗಿನ ಪ್ರಸ್ತಾವನೆಯನ್ನು ದಿನಾಂಕ 14-01-2016ರಂದು ಜರುಗಿದ ನಿಗಮದ 337ನೇ ಮಂಡಳಿ ಮುಂದೆ ಅವಲೋಕನ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ನಿಗಮದ ಮಂಡಳಿಯು ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿ, ತನ್ನದೇ ಆದ ವರ್ಗೀಕರಣದಡಿಯಲ್ಲಿ ಕೈಗಾರಿಕಾ ವಸಾಹತುಗಳು, ಜಿಲ್ಲೆಗಳನ್ನು ವರ್ಗೀಕರಣ ಪ್ರತ್ಯೇಕವಾಗಿ ಮಾಡದೇ ಹೊಸ ಕೈಗಾರಿಕಾ ನೀತಿ 2014-19ರಂತೆಯೇ ಯಥಾವತ್ತಾಗಿ ಅಳವಡಿಸಿಕೊಳ್ಳಲು ಅನುಮೋದನೆ ನೀಡಿರುತ್ತದೆ.

ಮುಂದುವರೆದಂತೆ, ಮಂಡಳಿಯು, ತನ್ನ ಸದರಿ ಸಭೆಯಲ್ಲಿ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ಅನ್ವಯ ನಿಗಮದ ವತಿಯಿಂದ ಸ್ಥಾಪಿಸಲ್ಪಡುವ ಕೈಗಾರಿಕಾ ವಸಾಹತುಗಳನ್ನು ವಲಯಗಳನ್ನಾಗಿ ವರ್ಗೀಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಿದೆ. ಅದರಂತೆ, ಈ ಕೆಳಗಿನ ಆದೇಶವನ್ನು ಹೊರಡಿಸಲಾಗಿದೆ.

## **ಆ ದೇ ಶ**

1] ನಿಗಮದ ಕೈಗಾರಿಕಾ ವಸಾಹತುಗಳ ಕಾರ್ಯಚಟುವಟಿಕೆಗಳ ಸುಲಲಿತ ಆಡಳಿತದ ಸಲುವಾಗಿ, ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ನಮೂದಿತಗೊಂಡಿರುವಂತೆಯೇ, ನಿಗಮದಿಂದ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕಾ ವಸಾಹತುಗಳಿರುವ ಆಯಾ ತಾಲ್ಲೂಕುಗಳು ಹಾಗೂ ನಿಗಮದ ಕೈಗಾರಿಕಾ ವಸಾಹತುಗಳನ್ನೂ ಸಹ ಅದೇ ರೀತಿ ರಾಜ್ಯದ ತಾಲ್ಲೂಕುಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶ ತಾಲ್ಲೂಕುಗಳು ಹೆಚ್.ಕೆ ವಲಯ-1 / ಹೆಚ್.ಕೆ ವಲಯ-2 ಎಂಬುದಾಗಿಯೂ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶ ತಾಲ್ಲೂಕುಗಳನ್ನು ಬಿಟ್ಟು ಇತರೇ ತಾಲ್ಲೂಕುಗಳನ್ನು ಅನುಕ್ರಮವಾಗಿ ವಲಯ-1, ವಲಯ-2, ವಲಯ-3 ಮತ್ತು ವಲಯ-4 ಎಂಬುದಾಗಿ ಒಟ್ಟು 04 ವಲಯಗಳನ್ನಾಗಿ ವರ್ಗೀಕರಿಸಲಾಗಿದೆ ಹಾಗೂ ನಿಗಮದ ಮಳಿಗೆ/ನಿವೇಶನ/ಫ್ಲ್ಯಾಟ್ಸ್/ಗೋದಾಮುಗಳ ಮೌಲ್ಯ ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ನಿಗಮದಲ್ಲಿ ಹಾಲಿ ಜಾರಿಯಲ್ಲಿರುವ **ಪ್ರಚಲಿತ ಮಾರ್ಗಸೂಚಿ**ಗಳನ್ನು ಅನುಸರಿಸತಕ್ಕದ್ದು.

ಕರಾಸಕೈಅನಿನಿ

-3-

2] ಅಂತೆಯೇ, ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ರಾಜ್ಯದ ತಾಲ್ಲೂಕುಗಳನ್ನು ವಿವಿಧ 06(ಆರು) ವಲಯಗಳನ್ನಾಗಿ ವರ್ಗೀಕರಿಸಲಾಗಿರುವಂತೆಯೇ **ಯಥಾವತ್ತಾಗಿ** ನಿಗಮದಲ್ಲಿಯೂ ಸಹ ವರ್ಗೀಕರಣ ಮಾಡಲಾಗಿದೆ. ತಾಲ್ಲೂಕುಗಳನ್ನು ವಲಯಗಳನ್ನಾಗಿ ವರ್ಗೀಕರಿಸಿರುವ ವರ್ಗೀಕರಣದ ಉದ್ಧೃತ ಭಾಗದ ಪ್ರತಿಯನ್ನು ಈ ಆದೇಶಕ್ಕೆ **ಅನುಬಂಧ – 'ಅ'** ಆಗಿ ಲಗತ್ತಿಸಿದೆ.

3] ಅಂತೆಯೇ, ನಿಗಮವು ಯಾವುದೇ ತಾಲ್ಲೂಕುಗಳಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವಾಗ ಸರ್ಕಾರಿ ಆದೇಶದಂತೆಯೇ ವರ್ಗೀಕರಣವನ್ನು ಅನುಸರಿಸತಕ್ಕದ್ದು.

4] ಇನ್ನು ಮುಂದೆ ನಿಗಮದಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವಾಗ ಮೇಲೆ ಆದೇಶಿಸಿರುವಂತೆ ಕೈಗಾರಿಕಾ ವಸಾಹತುಗಳನ್ನು ಸೂಕ್ತ ರೀತಿಯಲ್ಲಿ ವರ್ಗೀಕರಿಸತಕ್ಕದ್ದು ಹಾಗೂ ನಿಗಮದ ಕೈಗಾರಿಕಾ ಮಳಿಗೆ/ನಿವೇಶನ/ಫ್ಲ್ಯಾಟ್ಸ್/ಅಂಗಡಿ/ಗೋದಾಮುಗಳ ಮೌಲ್ಯ ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ನಿಗಮದಲ್ಲಿ ಹಾಲಿ ಜಾರಿಯಲ್ಲಿರುವ **'ಪ್ರಚಲಿತ ಮಾರ್ಗಸೂಚಿ'**ಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

5] ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಂಚಿಕೆದಾರರಿಗೆ ಸಹಾಯಧನ ವಿಸ್ತರಿಸುವ ಸಂದರ್ಭದಲ್ಲಿ ಅನುಬಂಧ-ಅ ನಲ್ಲಿ ನಮೂದಿಸಿರುವ ಕೈಗಾರಿಕಾ ವಸಾಹತುಗಳ ವರ್ಗೀಕರಣವನ್ನು **ಕಡ್ಡಾಯವಾಗಿ ಪರಿಗಣನೆಗೆ** ತೆಗೆದುಕೊಳ್ಳತಕ್ಕದ್ದು.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಹಾಗೂ ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ನು ತಪ್ಪದೇ ಕಟ್ಟುನಿಟ್ಟಾಗಿ [scrupulously] ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಪ್ರಧಾನ ವ್ಯವಸ್ಥಾಪಕರು(ಆಡಳಿತ & ಭೂಸ್ವಾಧೀನ)/(ಕೈವ & ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ.
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಲೆಪ, ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ರಾಜಾಜಿನಗರ (ನ)/ (ಗ್ರಾ)/ ವಾ.ಲೆ(ಪ್ರ) / ವ&ಕಾಲೆ(ಪ್ರ)/ಸಿಬ್ಬಂದಿ/ಪೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳಿ/ಬೆಳಗಾವಿ/ಕಲಬುರಗಿ/ಮೈಸೂರು/ ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು,(ಭೂಸ್ವಾಧೀನ/ಸಾ.ಸಂ) / (ಸಮನ್ವಯ) / (ಕಾನೂನು), / ಬೆಂ-ನಗರ / ಸಮನ್ವಯ, ಕರಾಸಕೈಅನಿನಿ, ಬೆಂಗಳೂರು/ ವೀರಸಂದ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು[ಗಣಕಯಂತ್ರ], ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

**ಪ್ರತಿಗಳು :**

1. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.

### 5.4 Classification of Taluks into Zones

The vision statement of this policy is to build a prosperous Karnataka through inclusive, sustainable and balanced industrial development. An analysis of investments made by the industries in various taluks of the State with respect to their population reveals that many of the taluks are industrially backward.

Focused effort is needed for dispersal of the industries to the industrially backward taluks to realize this vision. Considering the average per capita industrial investment and per capita employment in the taluks, the taluks are classified in to different zones.

Keeping in view the carving out of a separate Hyderabad Karnataka region as per the provisions of Article 371(j), the State has been classified into two areas namely Hyderabad Karnataka Area and other than Hyderabad Karnataka Area.

In order to create a strong industrial base with equitable allocation of funds and for overall development of the State the taluks are grouped with separate incentives and concessions in different zones as below:

i. *Hyderabad Karnataka Area is classified into two Zones namely HK Zone 1 and HK Zone 2.*

ii. *Likewise taluks in other than Hyderabad Karnataka Area are classified into four Zones namely Zone 1, Zone 2, Zone 3 & Zone 4.*

iii. *Most backward taluks are in Zone 1, more backward taluks in Zone 2, backward taluks in zone 3 and industrially developed taluks in Zone 4. In Hyderabad Karnataka Area, most backward taluks are in HK Zone 1, more backward taluks are in HK Zone 2.*

iv. *Keeping in view the rapid urbanization, potential for industrial development and dispersal of industries to tier II cities, taluks like Mysore, Mangalore, Tumkur, Nanjangud, Hubli-Dharwad and Belgaum are brought under Zone 3.*

v. *The classifications of the taluks are given below:*

| Sl. No. | Districts | Total No. of Taluks | Hyderabad Karnataka Area taluks | | Other than Hyderabad Karnataka Area taluks | | | |
|---|---|---|---|---|---|---|---|---|
| | | | HK Zone 1 | HK Zone 2 | Zone 1 | Zone 2 | Zone 3 | Zone 4 |
| 1 | 2 | 3 | 4 | 5 | 6 | 7 | 8 | 9 |
| 1 | B'lore (U) | 4 | - | - | - | - | - | Anekal |
| | | | - | - | - | - | - | B'lore (N) |
| | | | - | - | - | - | - | B'lore (S) |
| | | | - | - | - | - | - | B'lore (E) |
| 2 | B'lore (R) | 4 | - | - | - | - | - | Devanahalli |
| | | | - | - | - | - | - | D'ballapura |
| | | | - | - | - | - | - | Hoskote |
| | | | - | - | - | - | - | Nelamangala |
| 3 | Ramanagara | 4 | - | - | - | - | Magadi | Ramanagara |
| | | | - | - | - | - | Channapattana | - |
| | | | - | - | - | - | Kanakapura | - |
| 4 | Chitradurga | 6 | - | - | - | Hiriyur | - | - |
| | | | - | - | - | Molkalmuru | - | - |
| | | | - | - | Holalkere | Chitradurga | - | - |
| | | | - | - | - | Hosadurga | Challakere | - |
| 5 | Davanagere | 6 | - | - | Channagiri | Honnali | Davanagere | - |
| | | | - | - | Jagalur | - | Harihar | - |
| | | | - | - | H P Halli | - | - | - |
| 6 | Chikka-ballapura | 6 | - | - | Gudibande | Chintamani | Gowribidanur | - |
| | | | - | - | Bagepalli | C' ballapura | Siddlaghatta | - |
| 7 | Kolar | 5 | - | - | Mulbagal | - | Kolar | - |
| | | | - | - | Srinivasapura | - | Bangarpet | - |
| | | | - | - | - | - | Malur | - |
| 8 | Shimoga | 7 | - | - | Soraba | Hosanagara | Shimoga | - |
| | | | - | - | - | - | Bhadravathi | - |
| | | | - | - | - | - | Sagar | - |
| | | | - | - | - | - | Shikaripura | - |
| | | | - | - | - | - | Thirthahalli | - |

| Sl. No. | Districts | Total No. of Taluks | Hyderabad Karnataka Area taluks | | Other than Hyderabad Karnataka Area taluks | | | |
|---|---|---|---|---|---|---|---|---|
| | | | HK Zone 1 | HK Zone 2 | Zone 1 | Zone 2 | Zone 3 | Zone 4 |
| 1 | 2 | 3 | 4 | 5 | 6 | 7 | 8 | 9 |
| 9 | Tumkur | 10 | - | - | - | Madhugiri | Tumkur | |
| | | | - | - | - | - | Turuvekere | - |
| | | | - | - | - | Koratagere | Tiptur | - |
| | | | - | - | - | Gubbi | Chikkanaya kanahalli | - |
| | | | - | - | - | Sira | Kunigal | - |
| | | | - | - | - | Pavagada | - | - |
| 10 | Chama-rajanagar | 4 | - | - | Yelandur | Chamarajanagar | - | - |
| | | | - | - | Gundlupet | Kollegal | - | - |
| 11 | Chick-magalur | 7 | - | - | - | Kadur | Chickmagaloru | - |
| | | | - | - | - | Mudigere | Shringeri | - |
| | | | - | - | - | Tarikere | Koppa | - |
| | | | - | - | - | - | N R Pura | - |
| 12 | Dakshina Kannada | 5 | - | - | - | - | Mangalore | - |
| | | | | | | Bantwal | Puttur | |
| | | | - | - | - | - | Sulya | - |
| | | | - | - | - | - | Belthangadi | - |
| 13 | Hassan | 8 | - | - | Arakalgud | Arasikere | Hassan | - |
| | | | - | - | Belur | C R Patna | Sakleshpura | - |
| | | | - | - | - | H N Pura | - | - |
| | | | - | - | - | Alur | - | - |
| 14 | Kodagu | 3 | - | - | Virajpet | Madikeri | - | - |
| | | | - | - | - | Somwarpet | - | - |
| 15 | Mandya | 7 | - | - | Malavalli | Srirangapatna | Mandya | - |
| | | | - | - | - | Nagamangala | Maddur | - |
| | | | - | - | - | K R Pet | - | - |
| | | | - | - | - | Pandavapura | - | - |
| 16 | Mysore | 7 | - | - | - | - | Mysore | - |
| | | | - | - | Periyapatna | Hunsur | Nanjangud | - |
| | | | - | - | H D Kote | T N Pura | - | - |
| | | | - | - | - | K R Nagara | - | - |

| Sl. No. | Districts | Total No. of Taluks | Hyderabad Karnataka Area taluks | | Other than Hyderabad Karnataka Area taluks | | | |
|---|---|---|---|---|---|---|---|---|
| | | | HK Zone 1 | HK Zone 2 | Zone 1 | Zone 2 | Zone 3 | Zone 4 |
| 1 | 2 | 3 | 4 | 5 | 6 | 7 | 8 | 9 |
| 17 | Udupi | 3 | - | - | - | - | Udupi | - |
| | | | - | - | - | - | Kundapura | - |
| | | | - | - | - | - | Karkala | - |
| 18 | Bagalkote | 6 | - | - | - | Bilagi | Bagalkote | - |
| | | | - | - | - | Badami | Mudhol | - |
| | | | - | - | - | - | Jamkhandi | - |
| | | | - | - | - | - | Hunagund | - |
| 19 | Belgaum | 10 | - | - | - | - | Belgaum | - |
| | | | - | - | - | Bailhongal | Athani | - |
| | | | - | - | - | Soundathi | Hukkeri | - |
| | | | - | - | - | Chikkodi | Gokak | - |
| | | | - | - | - | Raibag | Khanapur | - |
| | | | - | - | - | - | Ramdurg | - |
| 20 | Bijapur | 5 | - | - | Muddebihal | Sindgi | - | - |
| | | | - | - | B Bagewadi | Indi | - | - |
| | | | - | - | - | Bijapur | - | - |
| 21 | Dharwad | 5 | - | - | - | - | Dharwad | - |
| | | | - | - | - | - | Hubli | - |
| | | | - | - | - | Navalgund | Kalghatagi | - |
| | | | - | - | - | - | Kundaghol | - |
| 22 | Gadag | 5 | - | - | Nargund | Mundargi | Gadag | - |
| | | | - | - | Ron | - | Shirahatti | - |
| 23 | Haveri | 7 | - | - | Hirekerur | Savanur | Ranebennur | - |
| | | | - | - | Hanagal | Shiggaon | Byadagi | - |
| | | | - | - | - | Haveri | - | - |
| 24 | Uttara Kannada | 11 | - | - | - | Honnavar | Karwar | - |
| | | | - | - | - | Sirsi | Haliyal | - |
| | | | - | - | - | Mundagod | Supa | - |
| | | | - | - | - | Yellapura | Bhatkal | - |
| | | | - | - | - | Siddapura | Ankola | - |
| | | | - | - | - | - | Kumta | - |

| Sl. No. | Districts | Total No. of Taluks | Hyderabad Karnataka Area taluks | | Other than Hyderabad Karnataka Area taluks | | | |
|---|---|---|---|---|---|---|---|---|
| | | | HK Zone 1 | HK Zone 2 | Zone 1 | Zone 2 | Zone 3 | Zone 4 |
| 1 | 2 | 3 | 4 | 5 | 6 | 7 | 8 | 9 |
| 25 | Bellary | 7 | H B Halli | Bellary | - | - | - | - |
| | | | Hadagalli | Hospet | - | - | - | - |
| | | | Kudligi | Sandur | - | - | - | - |
| | | | - | Siraguppa | - | - | - | - |
| 26 | Bidar | 5 | Bhalki | Bidar | - | - | - | - |
| | | | Humnabad | - | - | - | - | - |
| | | | Basava Kalyana | - | - | - | - | - |
| | | | Aurad | - | - | - | - | - |
| 27 | Gulbarga | 7 | Gulbarga | Sedam | - | - | - | - |
| | | | Afzalpur | Chittapur | - | - | - | - |
| | | | Aland | Chincholi | - | - | - | - |
| | | | Jewargi | - | - | - | - | |
| 28 | Yadgir | 3 | Yadgir | - | - | - | - | |
| | | | Shahapur | - | - | - | - | - |
| | | | Shorapur | - | - | - | - | - |
| 29 | Koppal | 4 | Kushtagi | Koppal | - | - | - | - |
| | | | Yelburga | Gangavathi | - | - | - | - |
| 30 | Raichur | 5 | Sindhanur | Raichur | - | - | - | - |
| | | | Manvi | - | - | - | - | - |
| | | | Lingasugur | - | - | - | - | - |
| | | | Devadurga | - | - | - | - | - |
| | Total | 176 | 20 | 11 | 23 | 51 | 62 | 9 |